1	2	3	4	5	6	7
25.	Tumkur	Tumkur	2	54.23	4	108.00
		Gubbi	2	54.11	3	108.00
		Kunnigal	2	57.27	4	108.00
		Turuvekere	2	49.07	4	108.00
		Tiptur	2	58.09	4	108.00
		Pavagada	2	52.44	4	108.00
		Koratagere	2	51.56	5	108.00
		Madhugiri	2	50.78	7	108.00
		Sira	1	62.40	4	108.00
		C.N. Halli	2	55.54	5	108.00
26.	Udupi	Udupi	2	24.35	9	306.15
		Karkala	5	80.85	7	106.00
		Kundapur	2	49.52	5	148.00
		Karwar	3	52.62	3	108.00
		Ankola	1	59.62	3	108.00
		Honnavara	2	62.60	5	140.00
		Bhatkal	2	59.42	4	108.70
		Kumta	1	55.82	2	108.00
27.	U.Kannada	Joida	1	59.42	4	105.50
		Haliyal	2	61.35	4	107.00
		Yellapur	2	55.02	2	108.00
		Mundgod	1	59.00	5	108.00
		Sirsi	1	55.00	4	130.00
		Siddapur	2	59.94	2	108.00
		Total	**414**	**10352.21**	**938**	**20335.03**

ನಗರಸಭೆ:ಪುರಸಭೆ:ಪಟ್ಟಣ ಪಂಚಾಯಿತಿಗಳಲ್ಲಿ ಕಂದಾಯ ಪರಿಷ್ಕರಣ ನಿಯಮ

176(1427) ಶ್ರೀ ಶಿವಣ್ಣ ಎಸ್. (ತುಮಕೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ನಗರಸಭೆ: ಪುರಸಭೆ : ಪಟ್ಟಣ ಪಂಚಾಯಿತಿ ಪ್ರತಿ ಐದು ವರ್ಷಕ್ಕೊಮ್ಮೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಂದಾಯ ಪರಿಷ್ಕರಣೆ ನಿಯಮ ಅಳವಡಿಸಲಾಗಿದೆಯೇ? ಇಲ್ಲವಾದಲ್ಲಿ, ಕಂದಾಯ ಪರಿಷ್ಕರಣೆ ಮಾಡಲು ಗ್ರಾಮ ಪಂಚಾಯ್ತಿಯು ತೆಗೆದುಕೊಳ್ಳಬೇಕಾದ ಕ್ರಮಗಳೇನು?

2) ಹಾಲಿ ಗ್ರಾಮ ಪಂಚಾಯಿತಿಯಲ್ಲಿ (ಮನೆ:ನಿವೇಶನ ಪಟ್ಟಿ) ತಯಾರಿಸುವ ಅವಕಾಶ ಗ್ರಾಮ ಪಂಚಾಯ್ತಿ ಕಾಯ್ದೆಯಲ್ಲಿ ಇದೆಯೇ : ಇಲ್ಲವಾದಲ್ಲಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಿವೇಶನ : ಮನೆಗಳ ಅಳತೆ ಹಾಗೂ ಸ್ಥಿತಿಗತಿಯ ಬಗ್ಗೆ ನಿರ್ಧಾರಣಾ ಮಾಡುವ ತಃಖ್ತೆ ಯಾವುದು?

3) ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಗ್ರಾಮಗಳಲ್ಲಿನ ಗ್ರಾಮ ಸರಹದ್ದುಗಳಲ್ಲಿನ ಸರ್ವೆ ನಂಬರ್: ಜಮೀನುಗಳಲ್ಲಿ ನಿರ್ಮಾಣ ಮಾಡಿಕೊಂಡಿರುವ ಮನೆ ಖಾತೆ : ಕಂದಾಯದ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರವುಳ್ಳ ಪ್ರಾಧಿಕಾರ ಯಾವುದು?

ಶ್ರೀ ಎಂ.ವೈ. ಘೋರ್ಪಡೆ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

1) ಅಳವಡಿಸಲಾಗಿದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು 1994, ನಿಯಮ 14ರಲ್ಲಿ ಪರಿಷ್ಕರಣೆಗೆ ಅವಕಾಶ ಕಲ್ಪಿಸಲಾಗಿದೆ.

2) ಇದೆ.

ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯಿತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮ 1994 ನಿಯಮ 7ರಲ್ಲಿ ನಿವೇಶನ : ಮನೆಗಳ ಅಳತೆ ಹಾಗೂ ಸ್ಥಿತಿಗತಿಯ ನಿರ್ಧರಣೆ ಮಾಡುವ ಬಗ್ಗೆ ತಿಳಿಸಲಾಗಿದೆ.

3) ಸರ್ವೆ ನಂಬರ್ ಜಮೀನುಗಳಲ್ಲಿ ಮನೆ ನಿರ್ಮಿಸಿಕೊಳ್ಳುವ ಮೊದಲು ಕೃಷಿಯೇತರ ಜಮೀನು ಎಂದು ಸಂಬಂಧಿಸಿದ ಕಂದಾಯ ಅಧಿಕಾರಿಗಳಿಂದ ಪರಿವರ್ತನೆ ಪಡೆದ ನಂತರ ಈ ಜಮೀನಿನಲ್ಲಿ ಕಟ್ಟುವ ಮನೆಯ ವಿವರಗಳನ್ನು ಖಾತೆ ಇತ್ಯಾದಿ ಮಾಡಲು ಗ್ರಾಮ ಪಂಚಾಯಿತಿಯು ಕ್ರಮ ಕೈಗೊಳ್ಳುವುದು.

ಬರಗಾಲ ಪರಿಹಾರಕ್ಕೆ ಕೇಂದ್ರದಿಂದ ಬಂದ ಹಣ

249(2031) ಶ್ರೀ ಜಗದೀಶ್ ಶೆಟ್ಟರ್(ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 2001-02ನೇ ಸಾಲಿನಲ್ಲಿ ಬರಗಾಲ ಪರಿಹಾರಕ್ಕಾಗಿ ರಾಜ್ಯ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬಿಡುಗಡೆಯಾಗಿರುವ ಹಣ ಎಷ್ಟು (ವಿವರ ನೀಡುವುದು)?

ಆ) ಈ ಹಣದಲ್ಲಿ ರಾಜ್ಯ ಸರ್ಕಾರ ಖರ್ಚು ಮಾಡಿದ ಹಣ ಎಷ್ಟು (ವಿವರ ನೀಡುವುದು)?

ಇ) ಇನ್ನುಳಿದ ಹಣವನ್ನು ಯಾವ ಯಾವ ಯೋಜನೆಗಳಿಗೆ ಖರ್ಚು ಮಾಡಲಾಗಿದೆ (ವಿವರ ನೀಡುವುದು)?

ಈ) ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುವ ಈ ಹಣವನ್ನು ಸರಿಯಾಗಿ ಬಳಸಿಕೊಳ್ಳದೆ ಇರಲು ಕಾರಣವೇನು?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ(ಕಂದಾಯ ರಾಜ್ಯ ಸಚಿವರು):

ಅ) ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಬರಪರಿಹಾರಕ್ಕಾಗಿ ಅನುದಾನ ಬಿಡುಗಡೆಯಾಗಿರುವುದಿಲ್ಲ.

ಕೇಂದ್ರ ಸರ್ಕಾರದ ವಿತ್ತ ಮಂತ್ರಾಲಯದಿಂದ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ನಿಗಧಿತ ಅನುದಾನ ರೂ. 5872.00 ಲಕ್ಷ ಬಿಡುಗಡೆಯಾಗಿರುತ್ತದೆ.

ಆ) 2001-02ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ರೂ. 11229.51 ಲಕ್ಷಗಳನ್ನು ವೆಚ್ಚ ಮಾಡಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.